# ವೃಂದಾವನವೇ ಮಂದಿರವಾಗಿಹ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru, page No. 50.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 520.
3. **Note:** The lyrics in Ref. 2 are similar to that of the singer. They are given without any highlights.
4. **Note:** The lyrics given in Ref. 1 are slightly different from the lyrics in Ref. 2. They are given separately in yellow highlights.

ರಾಗ: ಸೌರಾಷ್ಟ್ರ ತಾಳ: ಆದಿ

ವೃಂದಾವನವೇ ಮಂದಿರವಾಗಿಹ ಇಂದಿರೆ ಶ್ರೀ ತುಳಸಿ || ಪ ||
ನಮ್ಮ ನಂದನ ಕಂದ ಮುಕುಂದಗೆ ಪ್ರಿಯವಾದ ಚಂದಾದ ಶ್ರೀ ತುಳಸಿ || ಅಪ ||

ತುಳಸಿ ವನದಲ್ಲಿ ಹರಿ ಇಹನೆಂಬೋದು ಶೃತಿ ಸಾರುತಿದೆ ಕೇಳಿ
ತುಳಸಿ ದರ್ಶನದಿಂದ ದುರಿತಗಳೆಲ್ಲ ಹರಿದು ಹೋಗೋದು ಕೇಳಿ
ತುಳಸಿ ಸ್ಪರ್ಶನದಿಂದ ದೇಹ ಪಾವನವೆಂದು ನೀವೆಲ್ಲ ತಿಳಿದು ಕೇಳಿ
ತುಳಸಿ ಸ್ಮರಣೆ ಮಾಡಿ ಸಕಲಿಷ್ಟವ ಪಡೆದು ಸುಖದಲಿ ನೀವು ಬಾಳಿ || ೧ ||

ಮೂಲ ಮೃತ್ತಿಕೆಯನು ಧರಿಸಿದ ಮಾತ್ರದಿ ಮೂರು ಲೋಕ ವಶವಾಹುದು
ಮಾಲೆಗಳನೆ ಕೊರಳಲಿಟ್ಟ ಮನುಜಗೆ ಮುಕ್ತಿ ಮಾರ್ಗವನೀವುದು
ಕಾಲ ಕಾಲಗಳಲಿ ಮಾಡಿದ ದುಷ್ಕರ್ಮ ಕಳೆದು ಬಿಸುಟು ಹೋಗೋದು
ಕಾಲನ ದೂತರ ಅಟ್ಟಿ ಕೈವಲ್ಯವ ಲೀಲೆಯ ತೋರುವುದು || ೨ ||

ಧರೆಯೊಳು ಸುಜನರ ಮರೆಯದೆ ಸಲಹುವ ವರಲಕ್ಷ್ಮೀ ಶ್ರೀ ತುಳಸಿ
ಪರಮ ಭಕ್ತರ ಪಾಪಗಳೆಲ್ಲ ತರಿದು ಪಾವನ ಮಾಡುವಳು ತುಳಸಿ
ಸಿರಿ ಆಯು ಪುತ್ರಾದಿ ಸಂಪತ್ತುಗಳನಿತ್ತು ಹರುಷವೀವಳು ತುಳಸಿ
ಪುರಂದರ ವಿಠಲನ್ನ ಚರಣ ಕಮಲದ ಸ್ಮರಣೆ ಕೊಡುವಳು ತುಳಸಿ || ೩ ||

**Note:** The lyrics given below are as per Ref. 1.  They are slightly different from the lyrics in Ref. 2.  They are given separately here in yellow highlights.

ರಾಗ:   ಸೌರಾಷ್ಟ್ರ                                         ತಾಳ:   ಛಾಪು

ಬೃಂದಾವನವೇ ಮಂದಿರವಾಗಿಹ ಇಂದಿರೆ ಶ್ರೀ ತುಳಸಿ     || ಪ ||

ನಂದ ನಂದನ ಮುಕುಂದಗೆ ಪ್ರಿಯಳಾದ ಚಂದದ ಶ್ರೀ ತುಳಸಿ     || ಅಪ ||

ತುಳಸಿಯ ವನದಲಿ ಹರಿ ಇಹನೆಂಬುದ ಶೃತಿ ಸಾರುತಿದೆ ಕೇಳಿ

ತುಳಸಿ ದರ್ಶನದಿಂದ ದುರಿತಗಳೆಲ್ಲವು ದೂರವಾಗುವುವು ಕೇಳಿ

ತುಳಸಿ ಸ್ಪರ್ಶವ ಮಾಡೇ, ದೇಹ ಪಾವನವೆಂದು ತಿಳಿದುದಿಲ್ಲವೇನು ಪೇಳಿ

ತುಳಸಿ ಸ್ಮರಣೆ ಮಾಡಿ ಸಕಲೇಷ್ಟಗಳ ಪಡೆದು ಸುಖದಿಂದ ನೀವು ಬಾಳಿ     || ೧ ||

ಮೂಲ ಮೃತ್ತಿಕೆಯನು ಮುಖದಲಿ ಧರಿಸಲು ಮೂಲೋಕ ವಶವಹುದು

ಮಾಲೆ ಕೊರಳಲಿಟ್ಟ ಮನುಜಗೆ ಮುಕ್ತಿಯ ಮಾರ್ಗವು ತೋರುವುದು

ಕಾಲ ಕಾಲಗಳಲಿ ಮಾಡುವ ದುಷ್ಕರ್ಮ ಕಳೆದು ಬಿಸಾಡುವುದು

ಕಾಲನ ದೂತರ ಕಳಚಿ ಕೈವಲ್ಯದ ಲೀಲೆಯ ತೋರುವುದು     || ೨ ||

ಧರೆಯೊಳು ಸುಜನರ ಮರೆಯದೆ ಸಲಹುವ ವರಲಕ್ಷ್ಮೀ ಶ್ರೀ ತುಳಸಿ

ಪರಮ ಭಕ್ತರ ಪಾಪಗಳನೆಲ್ಲ ತರಿದು ಪಾವನ ಮಾಡುವಳು ತುಳಸಿ

ಸಿರಿ ಆಯು ಪುತ್ರಾದಿ ಸಂಪದಗಳನಿತ್ತು ಹರುಷವೀವಳು ತುಳಸಿ

ಪುರಂದರ ವಿಠಲನ ಚರಣ ಕಮಲಗಳ ಸ್ಮರಣೆಯೀವಳು ತುಳಸಿ     || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ವೃಂದಾ** = ತುಳಸಿ

**ವೃಂದಾವನ** = ತುಳಸಿಯ ಕಟ್ಟೆ

**ತುಳಸಿ =** ಮೂಲ ಶಕ್ತಿ ಪಂಚಕದಲ್ಲಿ ಒಬ್ಬಳಾದ ರಾಧೆಯ ಶಾಪದಿಂದ ಕೃಷ್ಣ ಭಕ್ತನಾದ ಸುಧಾಮನು ಡಂಭಾಸುರನ ಮಗನಾಗಿ ಶಂಖಚೂಡನೆಂಬ ಹೆಸರಿನಿಂದ ಹುಟ್ಟಿದ.  ಇವನು ಜೈಗೀಷಮ್ಯ ಮುನಿಯ

ಉಪದೇಶದಿಂದ ವಿಷ್ಣು ಕವಚವೆಂಬ ಮಂತ್ರ ಪಡೆದು ಅದರ ಮಹಿಮೆಯಿಂದ ದೇವರಾಜ್ಯವನ್ನು ಆಕ್ರಮಿಸಿದ. ಆಗ ದೇವತೆಗಳು ಶಂಕರನಲ್ಲಿ ಮೊರೆ ಇಟ್ಟರು. ಶಿವನು ಶಂಖಚೂಡನನ್ನು ಎದುರಿಸಿ ಅವನನ್ನು ಕೊಳ್ಳಲು ಅಸಮರ್ಥನಾದಾಗ ಆಕಾಶವಾಣಿಯ ಸಂದೇಶದಂತೆ ವಿಷ್ಣು ಬ್ರಾಹ್ಮಣ ರೂಪದಿಂದ ಶಂಖಚೂಡನಲ್ಲಿ ಹೋಗಿ ಅವನ ಕವಚವನ್ನು ಅಪಹರಿಸಿ ಅವನು ಸಾಯುವಂತೆ ಮಾಡಿದನು. ಅವನ ಹೆಂಡತಿಯಾದ ವೃಂದೆ ವಿಷ್ಣುವಿನ ವಂಚನೆಗೊಳಗಾಗಿ ತುಳಸಿಯ ಗಿಡವಾದಳು (ಶಿವ. ಪು. ಯುಧ್ಧಖಂಡ ೨೭-೪೧)

**ಮೂಲ ಮೃತ್ತಿಕೆ** = ತುಳಸಿಯ ಗಿಡದ ಬೇರಿನ ಬಳಿಯಲ್ಲಿಯ ಮಣ್ಣು

**ಲೀಲೆ** = ಆನಂದ

**Classification:** Keerthane
**Ankita:** purandara vittala
**Location:** NA
**Category:** Tulasi Song
**Group Words:** tulasi, Krishna, vrindavana, mukunda, shruti, deha, smarane, nara, mukti, yama, vaikunta, bhumi, Lakshmi, papa, padma,
**Pravachana:** Vid Kallapur Pavamana Achar
**Explanation:** NA